ಒ.ಎಸ್.ನಂ:67/2020
ಡಿ.ಡಬ್ಲ್ಯೂ.1

**<u>ದಿ:06.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲು:-</u>**ವಾದಿ ಪರ ಶ್ರೀ**.J.T.S.,** ವಕೀಲರಿಂದ:**-**

ನಮ್ಮ ತಂದೆ ಹೆಸರು ಪಟೇಲ್ ಸಿದ್ದಪ್ಪ ಇರುತ್ತದೆ . ಈಗ ಸಾಕ್ಷಿಗೆ ದೃಡೀಕೃತ ಸರ್ವೆ ನಂಬರ್ 6/1 ರ ಇಸಿ ತೋರಿಸಿದ್ದು , ಸದರಿ ಇಸಿಯಲ್ಲಿ ಪಟೇಲ್ ಸಿದ್ದಪ್ಪ ಅವರು ಕೊಂಡಪ್ಪ ಅವರಿಗೆ ಕ್ರಯಕ್ಕೆ ನೀಡಿರುವುದಾಗಿ ನಮೂದು ಇರುತ್ತದೆ ಎಂದು ಸೂಚಿಸಿದಾಗ ಒಪ್ಪಿರುತ್ತಾರೆ . ಸಾಕ್ಷಿ ಒಪ್ಪಿದ ದಾಖಲೆಯನ್ನು ನಿಪಿ 19 ಎಂದು ಗುರುತಿಸಲಾಯಿತು. ನಿಪಿ 19 ರಲ್ಲಿ 5 ಎಕರೆ 17 ಗುಂಟೆ ಮಾರಾಟವಾಗಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ತಂದೆ ಸಿದ್ದಪ್ಪ ತಂದೆ ಬಸಪ್ಪ ಎಂದು ಕೂಡ ಕರೆಯುತ್ತಾರೆ . ಈಗ ಸಾಕ್ಷಿಗೆ ಸರ್ವೆ ನಂಬರ್ 6/1 ರ ಪಹಣಿ ತೋರಿಸಿದ್ದು , ಸದರಿ ಪಹಣಿಯಲ್ಲಿ ಸಿದ್ದಪ್ಪ ತಂದೆ ಬಸಪ್ಪ ರವರ ಹೆಸರು ಇದ್ದು , ಅವರು ನಮ್ಮ ತಂದೆ ಎಂದು ಒಪ್ಪಿಕೊಳ್ಳುತ್ತಾರೆ . ಸದರಿ ಪಹಣಿಯಲ್ಲಿ ಸರ್ವೆ ನಂಬರ್ 6/1 ರ ವಿಸ್ತೀರ್ಣ 5 ಎಕರೆ 17 ಗುಂಟೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಪಹಣಿಯನ್ನು ನಿಪಿ 20 ಎಂದು ಗುರುತಿಸಲಾಯಿತು. ಈಗ ನೋಡುತ್ತಿರುವ ರಿ.ಸ.ನಂ.6/1 ನೇದ್ದರ ಸನ್ 1977-78 ಸಾಲಿನ ಪಹಣಿ ಪತ್ರಿಕೆಯನ್ನು ತೋರಿಸಿದ್ದು ಸದರಿ ಪಹಣಿಯಲ್ಲ ಸಹ ವಿಸ್ತೀರ್ಣ 5 ಎಕರೆ 17 ಗುಂಟೆ ನಮೂದು ಇದ್ದು ಸಿದ್ದಪ್ಪ ತಂದೆ ಬಸಪ್ಪ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಪಹಣಿಯನ್ನು ನಿಪಿ 21 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ನಮಾನೆ 15 ಇಸಿಯನ್ನು ತೋರಿಸಿದ್ದು ಸದರಿ ದಾಖಲೆಯಲ್ಲಿ ಪಟೇಲ್ ಸಿದ್ದಪ್ಪ ಬರೆದುಕೊಟ್ಟವರು , ಕೊಂಡಪ್ಪ ಬರೆಸಿಕೊಂಡವರು ಸರ್ವೆ ನಂಬರ್ 6/1 ವಿಸ್ತೀರ್ಣ 5 ಎಕರೆ 17 ಗುಂಟೆ ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ನೋಡಿ ಗುರುತಿಸಿದ ಇಸಿಯನ್ನು ನಿಪಿ 22 ಎಂದು ಗುರುತಿಸಲಾಯಿತು. ನಿಡಿ 1 ದಾಖಲೆ ಪ್ರಕಾರ 19 ಎಕರೆ 09 ಗುಂಟೆ ರಂಗಪ್ಪ ತಂದೆ ಕೊಂಡಪ್ಪ ಅವರ ಹೆಸರಿಗೆ ಇರುತ್ತದೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ನಿಡಿ 1 ದಾಖಲೆ ತೋರಿಸಿ ಸದರಿ ದಾಖಲೆಯ 2 ನೇ ಪುಟದಲ್ಲಿ ಮುಚ್ಚನೂರು ವಾಸಿ ತಳವಾರು ಕರಿಯಪ್ಪನ ಮಗ ಹನುಮಪ್ಪನಿಗೆ ಕ್ರಯಕ್ಕೆ ಎಂದು ನಮೂದು

ಇರುತ್ತದೆ ಎಂದರೆ ಸಾಕ್ಷಿ ನೋಡಲು ಕಾಣುವುದಿಲ್ಲ ಎಂದು ಹೇಳುತ್ತಾರೆ . ಸಾಮಾನ್ಯವಾಗಿ ಒಂದು ಜಮೀನು ಖರೀದಿ ಮಾಡುವ ಕಾಲಕ್ಕೆ ಅವರ ಹೆಸರಿಗೆ ಪತ್ರವನ್ನು ಖರೀದಿ ಮಾಡಿರುತ್ತೇವೆ ಎಂದರೆ ಸರಿ. ನಿಡಿ 2 ಮುಟೇಷನ್ ರಲ್ಲಿ ಹಕ್ಕು ಪಡೆದವರು ಸಿದ್ದಪ್ಪ ತಂದೆ ಬಸಪ್ಪ ಬದಲಾವಣೆ ಮಾಡಿದವರು ಸಣ್ಣ ಹನುಮಪ್ಪ ತಂದೆ ಕರಿಯಪ್ಪ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಡಿ 2 ಪ್ರಕಾರ 1 ಎಕರೆ 14 ಗುಂಟೆ ಮತ್ತು 1 ಎಕರೆ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಹನುಮಂತಪ್ಪ ತಂದೆ ಸಣ್ಣ ಹನುಮಂತಪ್ಪ ಅವರು ನನಗೆ ಗೋತ್ತಿಲ್ಲ . ನಿಡಿ 3 ರ ಪ್ರಕಾರ ದಾವಾ ಆಸ್ತಿ ಸರ್ಕಾರದಿಂದ ಮಂಜೂರು ಆಸ್ತಿ ಇರುವುದಿಲ್ಲ ಆದೇಶ ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿ ಖರೀದಿ ಜಮೀನು ಆದ ಕಾರಣ ಭೂ ಮಂಡಲ ವ್ಯಾಪ್ತಿಗೆ ಬರುವುದಿಲ್ಲ ಎಂದು ಆದೇಶ ಆಗಿರುತ್ತದೆ ಎಂದರೆ ಸರಿ. ನಿಡಿ 4 ರ ಪುಟ 10 ರಲ್ಲ ಅರ್ಜಿದಾರನು ಅವರ ತಾತನ ಕಾಲದಿಂದಲೂ ಸದರಿ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದರು , ಈ ವರ್ಷ ಮಾತ್ರ ಗೌಡರ ಸಿದ್ದಪ್ಪ ಮಾಡುತ್ತಿದ್ದಾರೆ , ಅರ್ಜಿದಾರರ ಕೊರಿಕೆಗೆ ಸ್ವಂತಕ್ಕೆ ಮಾಡಿದ್ದಾರೆ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಡಿ 4 ರಲ್ಲಿ ಏನು ಆದೇಶ ಆಗಿರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಿಡಿ 6 ರಲ್ಲಿ O.S. 782/1994 ರಲ್ಲಿ ವಾದಿಯ ಹೆಸರು ಸಿದ್ದಪ್ಪ ಪ್ರತಿವಾದಿ ಹೆಸರು ಹನುಮಂತಪ್ಪ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಡಿ 14 ರಿಂದ 16 ಕಂದಾಯ ರಶೀದಿಗಳಲ್ಲಿ ಎಷ್ಟು ವಿಸ್ತೀರ್ಣ ಜಮೀನು ಇರುವ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿಡಿ 17 ರಿಂದ 19 ದಾಖಲೆಗಳ ಪ್ರಕಾರ ನನಗೆ ಒಟ್ಟು 6 ಎಕರೆ 30 ಗುಂಟೆ ಆಗುತ್ತದೆ ಎಂದರೆ ಸಾಕ್ಷಿ 6 ಎಕರೆ ಇರುತ್ತದೆ ಎಂದು ಹೇಳುತ್ತಾರೆ . ನಮ್ಮ ತಂದೆ ಸಿದ್ದಪ್ಪ ಅವರ ಕೊಂಡಪ್ಪ ಅವರಿಗೆ ದಿ: 16.11.1965 ರಲ್ಲಿ ಸರ್ವೆ ನಂಬರ್ 6/1 ರಲ್ಲಿ 5 ಎಕರೆ 17 ಗುಂಟೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೋತ್ತಿಲ್ಲ . ನಮ್ಮ ತಂದೆ ಮಾರಾಟ ಮಾಡಿದ್ದರು ಸಹ ನಾನು ನಕಲಿ ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲದೇ ಇದ್ದರು ಸಹ ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು